ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:3002/2019

ಚಾಸಾ:3 ಪ್ರಾಸಾ:2

ದಿನಾಂಕ: 24.10.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ವಿಶ್ವನಾಥ ಶೆಟ್ಟಿ |
| ತಂದೆಯ ಹೆಸರು | : | ಕೊರಗಯ್ಯ ಶೆಟ್ಟಿ |
| ವಯಸ್ಸು | : | 72 ವರ್ಷ |
| ಉದ್ಯೋಗ | : | ಮನೆ ಕೆಲಸ |
| ವಾಸ ಸ್ಥಳ | : | ಬೇಳೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಆರೋಪಿತರ ಪರಿಚಯವಿದೆ. ಚಾಸ.1 ನನ್ನ ಹೆಂಡತಿ. ದಿ:26.12.2018 ರಂದು ಸಂಜೆ 6 ಗಂಟೆ ಸುಮಾರಿಗೆ ನನ್ನ ಹೆಂಡತಿ ಹೊರಗೆ ಇರುವಾಗ ಆರೋಪಿತರು, ಸತೀಶ ಶೆಟ್ಟಿ ಹಾಗೂ ಮಂಜುನಾಥ ಶೆಟ್ಟಿ ಗುಂಪು ಕಟ್ಟಿಕೊಂಡು ನಮ್ಮ ಮನೆಯ ಅಂಗಳಕ್ಕೆ ಅಕ್ರಮ ಪ್ರವೇಶ ಮಾಡಿ ಚಾಸಾ.1ರವರಿಗೆ ಮನೆ ಕಟ್ಟಲು ಬಿಡುವುದಿಲ್ಲ ಎಂದು ಅವಾಚ್ಯವಾಗಿ ನಿಂದಿಸಿ, ಮೈಗೆ ಕೈ ಹಾಕಿ, ಮಾನ ಹಾನಿ ಮಾಡುವ ಉದ್ದೇಶದಿಂದ ಜುಟ್ಟು ಹಿಡಿದು, 1ನೆ ಆರೋಪಿ ಮತ್ತು ಸತೀಶ ಶೆಟ್ಟಿ ರವರು ಚಾಸಾ.1ರವರನ್ನು ನೆಲಕ್ಕೆ ದೂಡಿರುತ್ತಾರೆ. ಆಗ ನಮ್ಮ ಮನೆಯ ಪಕ್ಕದಲ್ಲಿ ಕೆಲಸ ಮಾಡುತ್ತಿದ್ದ ಚಾಸಾ.4 ಮತ್ತು 5 ರವರು ಬರುವುದನ್ನು ನೋಡಿ ಚಾಸಾ.1ರವರನ್ನು ಉದ್ದೇಶಿಸಿ ಮನೆ ಕಟ್ಟಲು ಬಿಡುವುದಿಲ್ಲ, ಕೊಂದು ಹಾಕುತ್ತೇವೆ ಎಂದು ಜೀವ ಬೆದರಿಕೆ ಹಾಕಿ ಓಡಿ ಹೋಗಿರುತ್ತಾರೆ. ಘಟನೆಯಿಂದ ಚಾಸಾ.1ರವರು ಮೊಣಕೈಗೆ ನೋವು-ಗಾಯವಾಗಿರುತ್ತದೆ. ಅದಕ್ಕಾಗಿ ಚಾಸ.1ರವರು ವೈದ್ಯರ ಬಳಿ ಚಿಕಿತ್ಸೆ ಪಡೆದಿರುತ್ತಾರೆ. ಈ ಬಗ್ಗೆ ಚಾಸಾ.1ರವರು ದೂರು ದಾಖಲಿಸಿರುತ್ತಾರೆ. ಈ ಘಟನೆಗೆ ಚಾಸ.1, ಚಾಸ.2 ಮತ್ತು 2 ನೇ ಆರೋಪಿ ನಡುವೆ ಜಾಗದ ವಿಚಾರವಾಗಿ ತಕರಾರು ಇರುವುದು ಕಾರಣವಾಗಿರುತ್ತದೆ. ಮಾರನೇ ದಿನ ಪಂಚನಾಮೆ

ಜರುಗಿಸಲು ಸ್ಥಳಕ್ಕೆ ಭೇಟಿ ನೀಡಿದಾಗ ನನ್ನ ಹೇಳಿಕೆ ಪಡೆದಿರುತ್ತಾರೆ. ನ್ಯಾಯಾಲಯದ ಮುಂದಿರುವ 1 ಮತ್ತು 2ನೇ ಆರೋಪಿತರನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸತೀಶ ಶೆಟ್ಟಿ ಮತ್ತು ಮಂಜುನಾಥ ಶೆಟ್ಟಿರವರನ್ನು ನೋಡಿದರೆ ಗುರುತಿಸುವುದಾಗಿ ಸಾಕ್ಷಿ ನುಡಿದಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು, ಆಲಿಸಿ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ . ದಂ. ಕುಂದಾಪುರ**